ಬರಬಾರದೇನು? ಯವ್ವ, ಹಂಗೆಲ್ಲ ನನ್ನ ಅಂದು ಮನ್ಸಿಗಿ ನೋವು ಮಾಡ್ಬ್ಯಾಡ. ನನ್ಗ ಭಾಳ ತ್ರಾಸ ಆಗ್ತದ...' ಎಂದವನೆ ತುಸು ತಡೆದೆ. ಆಮೇಲೆ ಗಂಟಲನ್ನು ಸರಿಪಡಿಸಿಕೊಂಡವರಂಗೆ ಮಾಡಿ,

'ಹ್ಞಾಂ, ಯವ್ವ, ಒಂದ್ಮಾತು ಹೇಳ್ತೀನಿ ಕೇಳು... ಈ ದಿವ್ಸ ಅಂತೂ ನಾ ಹಂಗ ಹೊಳ್ಳಿ ಹೋಗ್ಬಾರದಂತ ನಿರ್ಧಾರ ಮಾಡ್ಕೊಂಡನ ಬಂದೀನಿ. ಈ ಸಲ ನನ್ನ ಕೂಡ ನೀನು ಬರಲಿಕ್ಕೆನ ಬೇಕು. ಮುಪ್ಪಿನ ಕಾಲ್ದಾಗ ಈ ಮನ್ಯಾಗ ಒಬ್ಬಕಿನ ಏನು ಮಾಡ್ತಿ? ಏನರೆ ಹೆಚ್ಚು ಕಮ್ಮಿ ಆದ್ರ ಗತಿ ಏನು? ಈ ಊರಾಗ ನಿನ್ನವು ಅಂತನ್ನೋರು ಯಾರೂ ಇಲ್ಲ! ಅದಕ್ಕ, ನೀನು ಒಲ್ಲೆನದ ನನ್ನ ಕೂಡ ಬಂದ್ಬಿಡ್ಬೇಕು. ಯಾವುದ ಕಾರಣಕ್ಕೂ ನಿನ್ನ ಬಿಟ್ಟು ಬರಬಾರದಂತ ಬರೋ ಮುಂದ ನನ್ನ ಹೆಂಡ್ತಿ ತಾಕೀತು ಮಾಡಿ ಕಳಿಸ್ಯಾಳು! ಅಕಿ ನಿನ್ನ ಮ್ಯಾಲೆ ಜಿಂವಾನ ಇಟ್ಕೊಂಡಾಳು.



ಮುಪ್ಪಿನ ಕಾಲ್ದಾಗ ನಿನ್ನ ಸೇವೆ ಮಾಡೋ ಭಾಗ್ಯ ನಮ್ಮಿಬ್ಬರಿಗೂ ಕೊಡ್ಬೇಕು...' ಎಂದು ಕಣ್ಣಿಗೆ ನೀರು ತಂದುಕೊಂಡು ಅಂದೆ.

ಕಲ್ಲವ್ವನಿಗೆ ನನ್ನ ಮಾತುಗಳನ್ನು ಕೇಳಿ ಅದೇನನ್ನಿಸಿತೋ ಏನೋ... ತುಸು ಹೊತ್ತು ಒಂದೂ ಮಾತಾಡದೆ ಕುಂತಳು. ಮನದೊಳಗೆ ಏನೇನೋ ಲೆಕ್ಕ ಹಾಕತೊಡಗಿದಳು. ಅದಾದ ಮರುಗಳಿಗೆಯಲ್ಲಿ ದೀರ್ಘವಾದ ಉಸುರೆಳೆದುಕೊಂಡು ನಿರಾಳಳಾದಳು. ಒಲ್ಲದ ಮನಸ್ಸಿನಿಂದ ತುಟಿಯೊಳಗೆ ನಕ್ಕವರಂಗೆ ಮಾಡಿ,

'ಮಲ್ಲಣ್ಣ, ನೀನು ಹೇಳೂ ಮಾತು ಖರೇ ಐತಿ. ನನ್ಗರೆ ಈಗ ನಿನ್ನ ಬಿಟ್ರ ದಿಕ್ಕು ಅಂತ ಯಾರದಾರು? ನಿನ್ನದು ಸ್ವಚ್ಛ ಮನಸ್ಸು ಐತೆಂತನ ಈ ಮಾತು ಹೇಳಿದ್ದಿ! ನಮ್ಮ ಜೊತಿಗಿ ಬಂದು ಇದ್ಬಿಡು ಅಂತ ಜುಲುಮಿ ಮಾಡ್ಲಿಕ್ಕತ್ತಿರಿ. ಆದ್ರ, ಮಲ್ಲಣ್ಣ, ನನ್ನ ಕ್ಷಮಾ ಮಾಡು. ಯಾಕಂದ್ರ, ನೀ ಹೇಳ್ದಂಗ ನಾ ನಿನ್ನ ಕೂಡ ಬರಂಗಿಲ್ಲ. ಈ ಮುಪ್ಪಿನ ಕಾಲ್ದಾಗ ಯಾರಿಗೂ ಒಜ್ಜಿ ಆಗಿರಬಾರದು ಅಂತ ನಿರ್ಧಾರ ಮಾಡೀನಿ...'

ಕಲ್ಲವ್ವ ಇನ್ನೂ ಏನೋ ಹೇಳುವವಳಿದ್ದಳು ಎನ್ನುವಷ್ಟರಲ್ಲಿ ಅಡುಗೆ ಮನೆಯಲ್ಲಿ, 'ಮಿಂಯಾವ... ಮಿಂಯಾವ...' ಎಂದು ಬೆಕ್ಕು ಒದರಿದಂತಾಯಿತು. ಆಗ ಆಕೆ ಆ ಮಾತನ್ನು ಅಲ್ಲೇ ಬಿಟ್ಟು, 'ಹುಶ್... ಹುಶ್...' ಎನ್ನುತ್ತ ತಟ್ಟನೆ ಎದ್ದು ಹೋಗಿ ಅಡುಗೆ ಮನೆಯೊಳಗಿನ ಬೆಕ್ಕನ್ನು ಹೊರ ಹಾಕಿ ಬಂದು, ಮತ್ತೇ ನನ್ನ ಎದುರಿಗೆ ಕುಂತು ಮಾತಿಗಿಳಿದಳು.

'ಮಲ್ಲಣ್ಣ, ನಾ ಏನೋ ಹೇಳ್ಲಿಕಾಕತ್ತಿದ್ನೆಲ್ಲ... ಹ್ಞಾಂ, ಅದ... ಈಗ ತಿಂಗಳ್ಹಿಂದೆ ದೇವ್ರಕೊಂಡಜ್ಜನ ಮಠದ ಜಾತ್ರಿಗಿ ಶಿವಾನಂದ ಭಾರತಿ ಅಪ್ಪಗೋಳು ಪ್ರವಚನ ಕೊಡ್ಲಿಕ್ಕೆಂತ ಬಂದಿದ್ರು. ಅವ್ರ ಪ್ರವಚನ ಕೇಳ್ಲಿಕ್ಕೆಂತ ನಾನೂ ಹೋಗಿದ್ದೆ. ಆ ದಿನ ಪ್ರವಚನ ಮುಗುದ್ಮ್ಯಾಲೆ ಶಿವಾನಂದ ಭಾರತಿ ಅಪ್ಪಗೋಳು ನನ್ನ ವೇದಿಕೆ ಮ್ಯಾಲೆ ಕರದು ಆಶೀರ್ವಾದ ಮಾಡಿದ್ರು. ಹಂಗ ನನ್ನ ರೂಪ ನೋಡಿ ಹಳಹಳಿಸ್ಲಿಕ್ಕತ್ತಿದ್ರು. ಒಂದು ರೀತಿ ಮುಖ ಮಾಡಿ ಚಡಪಡಿಸ್ದಂಗ ಮಾಡ್ಲಿಕ್ಕತ್ತಿದ್ರು! ಇದನ್ನೆಲ್ಲ ನೋಡಿ ನನ್ನ ಎದಿ ತುಂಬಿ ಬಂತು. ಹಿಂಗಾಗಿ, ನನ್ನ ದುಃಖ ತಡ್ಕೋಲಿಕ್ಕಾಗದ ಕಣ್ಣಾಗ ನೀರ ತುಂಬುಕೊಂಡು ಬಿಕ್ಕಳಸ್ಲಿಕ್ಕೆ ಶುರು ಮಾಡ್ದೆ. ಆ ವ್ಯಾಳ್ಯೆದಾಗ, ಶಿವಾನಂದ ಭಾರತಿ ಅಪ್ಪಗೋಳು ನನ್ನ ಪರಿಸ್ಥಿತಿ ಕಂಡು, 'ಕಲ್ಲವ್ವ, ಎಟ್ಟ ದಿನ ಅಂತ ಒಬ್ಬಕಿನ ಜಲುಮ ತೆಗೀತಿ? ನಮಗೆಲ್ಲ ನಿನ್ನ ತ್ರಾಸು ನೋಡ್ಲಿಕ್ಕಾಗವಲ್ದು. ನಿನ್ನ ಕಷ್ಟಕ್ಕ ಆಗದಿದ್ರ ಈ ಮಠ ಇದ್ದರೆ ಏನು ಸಾರ್ಥಕ ಆದಂಗಾತು? ಮುಪ್ಪು ಅಡರಿದ ಜೀವ ನಿಂದು. ಈ ವಯಸ್ಸಿನ್ಯಾಗ ಜಡ್ಡು ಜಾಪತ್ರೆ ಅಂತ ಏನರೆ ಬಂದ್ರ ಏನು ಮಾಡ್ತಿ? ಈ ಹೇಸಿ ಮನುಷ್ಯ ಜಲುಮ ಭಾಳ ಕೆಟ್ಟದ್ದವ್ವ! ಯಾರಿಗಿ ಯಾವಾಗ ಎಂಥ ಪರಿಸ್ಥಿತಿ ತಂದು ಇಡ್ತೈತೆಂತ ಗೊತ್ತಾಗಿಲ್ಲ. ಯಾರ ಆಸ್ರ ಇಲ್ದನ ಈ ಜನುಮನ ಚೆಂದಂಗಿ ಈಸಿ ದಡ ಸೇರೂದು ಅದೇನು ಸಾಮಾನ್ಯದ ಮಾತಂತ ತಿಳಿದಿದ್ದೆನು? ಕಲ್ಲವ್ವ, ನಿನ್ಗ ಒಂದು ಮಾತು ಹೇಳ್ತೀನಿ ಕೇಳು... ನೀನು ಪ್ರವಾಹದ ವಿರುದ್ಧ ಈಜತೀನಿ ಅನ್ನೂದು ಹುಚ್ಚುತನ ಅನ್ನೂದು ಮರೀಬ್ಯಾಡ. ಅಂಥ ಹುಚ್ಚತನ ಬಿಟ್ಬಿಡು. ಈ ಮಠನ ನಿನ್ನ ಮನೆ, ದೇವ್ರಕೊಂಡಜ್ಜನ ತಂದೆ–ತಾಯಿ ಅಂತ ತಿಳ್ಕೊಂಡು ಅವುನ ಸೇವಾ ಮಾಡ್ಕೊಂತ ಮಠದಾಗನ ಬಂದು ಇದ್ಬುಡು. ಇಲ್ಲಿ, ನೀನು ದಿಕ್ಕಿಲ್ಲದ ಪರದೇಶಿ, ನೀನು ಅನಾಥ ಅನ್ನೋ ಭಾವನೆನ ನಿನ್ಗ ಬರಂಗಿಲ್ಲ. ಒಂದು ರೀತೀಲೆ ನಿನ್ನ ಕಷ್ಟ ಸುಖ, ಜಡ್ಡು ಜಾಪತ್ರೆ, ಆಸ್ರ ಬ್ಯಾಸ್ರಕ್ಕೆಲ್ಲ ದೇವ್ರಕೊಂಡಜ್ಜನ ಈ ಮಠ ಆಸ್ರಾಗಿರತೈತಿ. ಈ ಮಠದ ಮ್ಯಾಲೆ ನಂಬಿಕೆ ಇಟ್ಟು ಬಂದು ಇದ್ಬುಡು. ಈ ವಯಸ್ಸಿನ್ಯಾಗ ನೀ ಕಷ್ಟ ಪಡೂದು ನಮಗೆಲ್ಲ ಚೆಂದ ಕಾಣ್ಸವಲ್ದು. ಹಂಗತನ ಆ ದೇವ್ರಕೊಂಡಜ್ಜನ ನನ್ನ ನಾಲಿಗೆ ಮ್ಯಾಲೆ ಈ ಮಾತಿಟ್ಟು ನುಡಿಸ್ಯಾನು...' ಅಂತಂದ್ರು. ಆ ವ್ಯಾಳ್ಯೆದಾಗ ಶಿವಾನಂದ ಭಾರತಿ ಅಪ್ಪಗೋಳ ಅಂದ ಆ ಮಾತು ಕೇಳಿ ನನ್ನ ಎದಿ ತುಂಬಿ ಬಂತು. ಆಗ, 'ಎಲ್ರೂ ಕೈ ಬಿಟ್ರೂ ಆ ದೇವ್ರಕೊಂಡಜ್ಜ ಮಾತ್ರ ನನ್ನ ಕೈ ಬಿಡ್ಲಿಲ್ಲಂತ ನನ್ಗ ಅನ್ನಿಸ್ತು...' ಎಂದವಳೆ ನಿಟ್ಟುಸಿರೊಂದನ್ನು ಬಿಟ್ಟು, ತುಂಬಿ ಬಂದ ಕಣ್ಣೀರನ್ನು ತನ್ನ ಸೆರಗಿನಿಂದ ಒರೆಸಿಕೊಂಡಳು. ಹಾಗೇ ಕತ್ತು ಮೇಲೆತ್ತಿ ಗೋಡೆಯ ಮೇಲಿದ್ದ ದೇವರಕೊಂಡಜ್ಜನ ಫೋಟಕ್ಕೆ ಕೈಮುಗಿದಳು. ಅರೆಗಳಿಗೆ ಆ ಫೋಟವನ್ನೇ ದಿಟ್ಟಿಸಿ ನೋಡಿದ ಕಲ್ಲವ್ವನಿಗೆ ಆ ಗಳಿಗೆಯಲ್ಲಿ ಅದೇನನ್ನಿಸಿತೋ ಏನೋ ಎಂಬಂತೆ ಸರಕ್ಕನೆ ನನ್ನತ್ತ ತಿರುಗಿ,

'ಮಲ್ಲಣ್ಣ, ನಿನ್ಗ ಒಂದ್ಮಾತು ಹೇಳ್ತೀನಿ ಕೇಳು... ನಾನು ಈಗ ಒಂದು ನಿರ್ಧಾರಕ್ಕೆ ಬಂದೀನಿ. ದೇವ್ರಕೊಂಡಜ್ಜನ ಚಾಕ್ರಿ ಮಾಡ್ಕೊಂತ ಮಠದಾಗನ ಹೋಗಿ ಇರಬೇಕಂತ ಮಾಡೀನಿ. ಈ ಹೇಸಿ ಜಲುಮಕ್ಕ ಬಂದು ಇದುವರೆಗೂ ಬರೀ ತ್ರಾಸನ ಉಂಡಿನಿ. ನನ್ನ ಹಣೇಬರದಾಗ ಅವ್ವಪ್ಪ ಸುಖ ಇಲ್ಲ, ಅಣ್ಣಮ್ಮರ ಸುಖ ಇಲ್ಲ, ಗಂಡನ ಸುಖ ಇಲ್ಲ... ಹಿಂಗ ಯಾವ ಸುಖನೂ ನಾನು ಉಣ್ಲಿಲ್ಲ. ಸಂಬಂಧಿಕರಂದ್ರ ನನ್ನ ಹೇಸಿಗಿ ಬಂದಂಗ ಆಗ್ಲಿಕ್ಕತ್ತೆದ. ಅಂಥಾದ್ರಾಗ, ಈ ಮುಪ್ಪಿನ ಕಾಲ್ದಾಗಂತೂ ನಾ ಯಾರಿಗೂ ಭಾರ ಆಗಿರಬಾರದು ಅಂತ ಮನಸ್ಸು ಮಾಡಿನಿ. ಅದಲ್ಲದ, ಗಂಡನ ಮನ್ಯಾಗ ನನ್ನ ಪಾಲಿಗೆ ಬರಬೇಕಿದ್ದ ಒಡಕಿ ಮ್ಯಾಲಿನ ಎರಡೆಕರೆ ಜಮೀನ ಈ ಮಠಕ್ಕನ ಬರುದು ಕೊಡ್ಬೇಕಂತ ನಿರ್ಧಾರ ಮಾಡೀನಿ. ಇದರ ಬಗ್ಗೆ ಶಿವಾನಂದ ಭಾರತಿ ಅಪ್ಪಗೋಳ ಕೂಡನೂ ಮಾತಾಡಿನಿ. ಅವ್ರು, ನಿನ್ನ ಇಚ್ಛಾ ಹೆಂಗೈತೆಲ್ಲ ಹಂಗ ಆಗಲಿ ಅಂದಾರು. ನೀ ಮಾತ್ರ ಯಾವುದಕ್ಕೂ ತಪ್ಪು ತಿಳೀಬ್ಯಾಡ...' ಎಂದು ಕಲ್ಲವ್ವ ಕಡ್ಡಿ ತುಂಡು ಮಾಡಿದಂತೆ ಅಂದಳು.

ಆ ಮಾತುಗಳನ್ನು ಕೇಳಿಸಿಕೊಳ್ಳುತ್ತ ಕಲ್ಲವ್ವನ ಎದುರಿಗೆ ಕುಂತಿದ್ದ ನನಗಂತೂ ಆಕೆ ಎತ್ತರಕ್ಕೆ, ಎತ್ತರಕ್ಕೆ, ಮತ್ತೂ ಎತ್ತರಕ್ಕೆ, ಇನ್ನೇನು ಆಕೆ ಆಕಾಶವನ್ನು ತನ್ನ ಬೆರಳ ತುದಿಯಿಂದಲೇ ಮೀಟಿ ಬಿಡುತ್ತಾಳೆ ಎನ್ನುವಷ್ಟು ಎತ್ತರಕ್ಕೆ ಬೆಳೆದು ನಿಂತಿದ್ದಾಳೆ ಎಂದೆನಿಸಿ ಕಟಿಕಟಿ ಬೆವೆತುಹೋದೆ.

ಪ್ರತಿಕ್ರಿಯಿಸಿ: feedback@sudha.co.in